CW.5 PW.5

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ**

# CC No.17/2016

| | |
|---|---|
| ಸಾಕ್ಷಿದಾರರ ಹೆಸರು | ಕುಮಾರ್ |
| ತಂದೆಯ ಹೆಸರು | ಕರಿಯಾಬೋವಿ |
| ವಯಸ್ಸು | 38 ವರ್ಷ |
| ವೃತ್ತಿ | ನಿರ್ವಾಹಕ |
| ವಿಳಾಸ | ಕನಕಪುರ |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 05.01.2026 |

**ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-**

ಆರೋಪಿಯನ್ನು ನೋಡಿರುತ್ತೇನೆ. ಆತನು ನಮ್ಮ ಚಾಲಕನಾಗಿರುತ್ತಾನೆ. ಚಾಸಾ-1 ರಿಂದ ಚಾಸಾ-4, ಚಾಸಾ-6 ರಿಂದ 10 ರವರ ಪರಿಚಯ ಇರುವುದಿಲ್ಲ.

2016 ರಲ್ಲಿ 11.30 ಗಂಟೆ ಸಮಯದಲ್ಲಿ ನಮ್ಮ ಕೆ ಎಸ್ ಆರ್ ಟಿ ಸಿ ಬಸ್ ಸಂಖ್ಯೆ ನೆನಪಿಲ್ಲ. ಅದರಲ್ಲಿ ನಾನು ಬಸ್ಸಿ ನ ಹಿಂದಿನ ಡೋರ್ ನ ಬಳಿ ನಿಂತು ಟಿಕೇಟ್ ಕೊಡುತ್ತಿದ್ದೇನು. ಆಟೋ ಒಂದು ಅಲ್ಲಿಗೆ ಬಂದು ಬಸ್ ಗೆ ಡಿಕ್ಕಿ ಹೊಡೆಸಿದ ಕಾರಣ ಅಪಘಾತವಾಗಿರುತ್ತದೆ. ನಂತರ ಆತನಿಗೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ನಾವೇ ಚಿಕಿತ್ಸೆ ಕೊಡಿಸಿರುತ್ತೇವೆ. ಆಟೋವಿನಲ್ಲಿ 4 ಜನ ಇದ್ದರು.

**(ಈ ಹಂತದಲ್ಲಿ ಸಾಕ್ಷಿದಾರ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದ ಕಾರಣ ಸ.ಸ ಅ ರವರು ಸಾಕ್ಷಿಯನ್ನು ವಾಟೀ ಸವಾಲನ್ನು ಮಾಡಲು ಅನುಮತಿ ನೀಡಲು ಕೋರಿದ ಮೇರೆಗೆ ಅನುಮತಿ ನೀಡಲಾಯಿತು).**

**ವಾಟೀ ಸವಾಲುಃ ಸ. ಸ. ಅ. ರವರಿಂದ**

ದಿಃ16.05.2014 ರಲ್ಲಿ ಅಪಘಾತವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯು ಸದರಿ ದಿನ ಕೆಎ-40 ಎಫ್-094 ಸದರಿ ಬಸ್ ನ್ನು ಚಾಲನೆ ಮಾಡುತ್ತಿದ್ದರು ಎಂದರೆ ಸರಿ. ಸದರಿ ದಿನ

ಬೆಳಿಗ್ಗೆ ಸುಮಾರು 11.15 ಗಂಟೆ ಸಮಯದಲ್ಲಿ ಆರೋಪಿ ಚಲಾಯಿಸುತ್ತಿದ್ದ ನಮ್ಮ ಬಸ್ ಕನಕಪುರ ಬಿಟ್ಟು ಕೋಡಿಹಳ್ಳಿ ಹುಣಸನಹಳ್ಳಿ ಮಾರ್ಗವಾಗಿ ಮುಗ್ಗಾರಿಗೆ ಹೋಗಿ ವಾಪಸ್ ಮುಗ್ಗಾರಿನಿಂದ ಹುಣಸನಹಳ್ಳಿ ಮಾರ್ಗವಾಗಿ ಭೀಮಗೊಂಡನಹಳ್ಳಿ ಕೆರೆಯ ಹತ್ತಿರ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಸದರಿ ಆಟೋಗೆ ಡಿಕ್ಕಿ ಪಡಿಸಿ ಅಪಘಾತವಾಗಿರುತ್ತದೆಂದರೆ ಸರಿಯಲ್ಲ. ಆಟೋವಿನಲ್ಲಿ 4 ಜನರ ಪೈಕಿ ಮೂರು ಜನರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು ಒಬ್ಬರಿಗೆ ಬಲಕಾಲು ಮುರಿದಿರುತ್ತದೆಂದರೆ ಸಾಕ್ಷಿಯು ನಾವೇ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ನಾವುಗಳು ಕರೆದುಕೊಂಡು ಹೋಗಿರುವುದಿಲ್ಲ, ಭೀಮಗೊಂಡನಹಳ್ಳಿ ಗ್ರಾಮದ ವಾಸಿಗಳು ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆಂದರೆ ಸರಿಯಲ್ಲ. ಆರೋಪಿ ನಮ್ಮ ಸಿಬ್ಬಂದಿ ಆಗಿರುವ ಕಾರಣ ನನಗೆ ಎಲ್ಲಾ ಮಾಹಿತಿ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಿಃ19.05.2014 ರಂದು ನಾನು ಈಗ ವಿವರವಾಗಿ ಓದಿ ಹೇಳಿದಂತೆ ಪೋಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಹೇಳಿಕೆಯನ್ನು ನಿಪಿ-3 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

ಸದರಿ ದಿನ ನಮ್ಮ ಬಸ್ ಸರಿಯಾಗೇ ಚಾಲನೆ ಮಾಡಿಕೊಂಡು ಬರುತ್ತಿದ್ದು ಸದರಿ ಆಟೋ ಅಜಾಗರೂಕತೆಯಿಂದ ಬಂದು ಡಿಕ್ಕಿ ಪಡಿಸಿ ಅಪಘಾತವಾಗಿರುತ್ತದೆ ಎಂದರೆ ಸರಿ.

**ಮರುವಿಚಾರಣೆಃ ಇರುವುದಿಲ್ಲ**

**ಓ ಹೇ ಕೇ ಸರಿ ಇದೆ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,**

**ಕನಕಪುರ .**